

# ಟ್ವಿಟರ್‌ನಲ್ಲೀಗ ಹೊಸ ಪರ್ವ

ವಾಟ್ಸಾಪ್‌ನಂತೆ ಟ್ವಿಟರ್ ಸಹ ಹಲವು ಫೀಚರ್‌ಗಳನ್ನು ತನ್ನ ಬಳಕೆದಾರರಿಗೆ ಪರಿಚಯಿಸಲು ಸಿದ್ಧತೆ ನಡೆಸಿದೆ. ಕೆಲವೇ ದಿನಗಳಲ್ಲಿ ಹೊಸ ಫೀಚರ್‌ಗಳು ಟ್ವಿಟರ್‌ನಲ್ಲಿ ಕಾಣಿಸಿಕೊಳ್ಳಲಿವೆ.

**ಶಶಿಕುಮಾರ್ ಸಿ.**

ಎಲಾನ್ ಮಸ್ಕ್ ತೆಕ್ಕೆಗೆ ಬಿದ್ದ ಬಳಿಕ ಹಲವು ವಿವಾದಗಳಿಂದ ಸುದ್ದಿಯಾಗುತ್ತಿರುವ ‘ಟ್ವಿಟರ್’, ವಿಶ್ವದಾದ್ಯಂತ ಇರುವ ತನ್ನ ಬಳಗಕ್ಕೆ ಕೆಲವು ವಿಶೇಷ ಫೀಚರ್‌ಗಳನ್ನು ನೀಡುವುದರ ಸುಳಿವು ನೀಡಿದೆ. ಟ್ವಿಟರ್ ಪರಿಚಯಿಸಲಿರುವ ಹಲವು ಫೀಚರ್‌ಗಳಲ್ಲಿ ಗಮನಾರ್ಹವಾದದ್ದು, 280 ಕ್ಯಾರೆಕ್ಟರ್ ಇದ್ದ ಮಿತಿಯನ್ನು 4 ಸಾವಿರಕ್ಕೆ ಏರಿಸುವ ‘ಲಾಂಗ್ ಫಾರ್ಮ್ ಟ್ವೀಟ್’.

ಸದ್ಯ ಟ್ವಿಟರ್‌ನಲ್ಲಿ 280 ಕ್ಯಾರೆಕ್ಟರ್‌ಗಷ್ಟೇ ಅವಕಾಶವಿದೆ. ಯಾವುದೇ ಬಳಕೆದಾರ ಈ ಮಿತಿಯಲ್ಲೇ ತನ್ನ ಟ್ವೀಟ್ ಪೋಸ್ಟ್ ಮಾಡಲು ಸಾಧ್ಯ. ಟ್ವಿಟರ್ ಜಗತ್ತಿನಾದ್ಯಂತ ಹೆಚ್ಚು ಜನಮನ್ನಣೆ ಗಳಿಸಲು ಈ ಮಿತಿಯೂ ಕಾರಣ. ಆದರೀಗ, ಈ ಮಿತಿಯ ವ್ಯಾಪ್ತಿಯನ್ನು ಮಸ್ಕ್ ವಿಸ್ತರಿಸಲು ಮುಂದಾಗಿದ್ದಾರೆ. ಫೆಬ್ರುವರಿಯಲ್ಲಿ ಪರಿಷ್ಕೃತ ಫೀಚರ್ ಬಿಡುಗಡೆಗೊಳ್ಳುವ ಸಾಧ್ಯತೆ ಇದೆ.

ಚಿಕ್ಕದಾಗಿ, ಚೊಕ್ಕವಾಗಿ, ಏನನ್ನು ಹೇಳಬೇಕಿತ್ತೋ ಅದನ್ನು ಸುಲಭವಾಗಿ ಹೇಳುವಿಕೆಯ ಗುಣವನ್ನು ಈಗಿನ ಟ್ವೀಟ್‌ಗಳಲ್ಲಿ ಕಾಣಬಹುದು. ಈಗ ಟ್ವೀಟ್‌ನ ಕ್ಯಾರೆಕ್ಟರ್ ಮಿತಿಯನ್ನು ಹೆಚ್ಚುಕಮ್ಮಿ 14 ಪಟ್ಟು ವಿಸ್ತರಿಸುತ್ತಿರುವುದು ಹೊಸ ಪ್ರಯೋಗವಾದರೂ, ಹಲವು ವೈರುಧ್ಯಗಳಿಗೆ ಆಸ್ಪದ ಕೊಟ್ಟಂತಿದೆ ಹಾಗೂ ಟ್ವಿಟರ್‌ನ ಮೂಲಸ್ವರೂಪ ಬದಲಾಗುವ ಸಾಧ್ಯತೆಯಿದೆ.




## ದೀರ್ಘ ಬರಹಕ್ಕೆ ಅವಕಾಶ

ಪದಬಳಕೆ ಮಿತಿಯಿಂದ ವಿವರವಾಗಿ ಹೇಳಬೇಕಿದ್ದನ್ನು ಹೇಳಲು ಥ್ರೆಡ್ ಮಾದರಿಯ ಟ್ವೀಟ್‌ಗಳ ಮೂಲಕ ಬೇರೆ ಬೇರೆಯಾಗಿಯೇ ಹೇಳಬೇಕಿತ್ತು. ಇದರಿಂದ ಹಲವು ಬಾರಿ ಪೋಸ್ಟ್‌ನ ತಿರುಚುವಿಕೆಯಂತಹ ಸಮಸ್ಯೆಗಳು ತಲೆದೋರುತ್ತಿದ್ದವು. ಥ್ರೆಡ್‌ಗಳಿಂದ ಗೊಂದಲವೂ ಉಂಟಾಗುತ್ತಿತ್ತು. ‘ಲಾಂಗ್ ಫಾರ್ಮ್ ಟ್ವೀಟ್’ನಿಂದಾಗಿ ಈ ಸಮಸ್ಯೆ ದೂರವಾಗಲಿದೆ.

ಬಳಕೆದಾರರು ಫಾಲೊ ಮಾಡುವ ಖಾತೆಗಳ ಟ್ವೀಟ್‌ಗಳನ್ನು ಮತ್ತು ಟ್ವಿಟರ್‌ನಿಂದ ಶಿಫಾರಸುಗೊಳ್ಳುವ ಟ್ವೀಟ್‌ಗಳನ್ನು ಪ್ರತ್ಯೇಕವಾಗಿ ನೋಡುವ ಅವಕಾಶವು ಟ್ವಿಟರ್‌ನಲ್ಲಿ ಲಭ್ಯವಾಗಲಿದೆ. ಇದು ಹೊಸ ಅಪ್‌ಡೇಟ್‌ನಲ್ಲಿ ಒಂದಾಗಿದ್ದು, ಬಲಕ್ಕೆ ಸ್ವೈಪ್ ಮಾಡಿದರೆ ಫಾಲೊ ಮಾಡುವವರ ಟ್ವೀಟ್‌ಗಳು ಕಾಣಲಿವೆ. ಎಡಕ್ಕೆ ಸ್ವೈಪ್ ಮಾಡಿದರೆ, ಟ್ವಿಟರ್ ಶಿಫಾರಸು ಮಾಡುವ ಟ್ವೀಟ್‌ಗಳು ಕಾಣಲಿವೆ.

## ಸುದೀರ್ಘ ಟ್ವೀಟ್ ಬಗ್ಗೆ ಆತಂಕ

ಎಲಾನ್ ಮಸ್ಕ್‌ರ ಈ ನಿಲುವು ತಮ್ಮ ಬಹುದಿನಗಳ ಬೇಡಿಕೆಗೆ ಪೂರಕವಾಗಿದೆ ಎಂಬುದು ಹಲವು ಟ್ವಿಟಿಗರ ವಾದವಾದರೆ, ‘ಕ್ಯಾರೆಕ್ಟರ್ ಮಿತಿಯನ್ನು 14 ಪಟ್ಟು ಹೆಚ್ಚಿಸುವುದರ ಬದಲಿಗೆ ಒಂದಂಕಿಯಷ್ಟು ಹೆಚ್ಚಿಸಿದರೆ ಟ್ವಿಟರ್‌ನ ಮೂಲ ಸ್ವರೂಪಕ್ಕೆ ಯಾವುದೇ ತೊಂದರೆಯಾಗದು. 14 ಪಟ್ಟು ಹೆಚ್ಚಿಸುವುದರಿಂದ ಟ್ವಿಟರ್ ಬ್ಲಾಗ್ ಆಗಿ ಪರಿವರ್ತನೆಗೊಳ್ಳುವ ಸಾಧ್ಯತೆ ಇದೆ’ ಎಂಬುದು ಹಲವರ ವಾದ.

‘ಈಗಿನ 280 ಕ್ಯಾರೆಕ್ಟರ್ ಮಿತಿಯಿಂದಾಗಿ ಬಳಕೆದಾರರು ಎಚ್ಚರಿಕೆಯಿಂದ ಪದಬಳಕೆ ಮಾಡಿ ಟ್ವೀಟ್‌ಗಳನ್ನು ಪೋಸ್ಟ್ ಮಾಡುತ್ತಾರೆ. ಇದರಿಂದ ಟ್ವೀಟ್‌ಗೂ ಮಹತ್ವ ಸಿಗುತ್ತಿದೆ. ಕ್ಯಾರೆಕ್ಟರ್ ಮಿತಿಯು 4 ಸಾವಿರಕ್ಕೆ ಹೆಚ್ಚಾದರೆ ಟ್ವೀಟ್‌ಗಳು ಬ್ಲಾಗ್ ರೀತಿ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಇತಿಮಿತಿಯಿಲ್ಲದೆ ಜನರು ಎಲ್ಲ ರೀತಿಯ ಬರಹಗಳನ್ನು ಲೇಖನ ರೂಪದಲ್ಲಿ ತುರುಕುವ ಸಾಧ್ಯತೆಯೂ ಇದೆ’ ಎಂಬುದು ಕೆಲವರ ಆತಂಕ. ಲಾಂಗ್ ಫಾರ್ಮ್ ಟ್ವೀಟಿನಿಂದ ಟ್ವಿಟರ್‌ನ ಥ್ರೆಡ್ ಮಾದರಿಯೂ ಕಣ್ಮರೆಯಾಗಬಹುದು.

## ಬರಲಿದೆ ಬುಕ್‌ಮಾರ್ಕ್

ಟ್ವೀಟ್ ವಿವರಗಳ ಮೇಲೆ ಬುಕ್‌ಮಾರ್ಕ್ ಬಟನ್ ಸದ್ಯದಲ್ಲೇ ಪ್ರತ್ಯಕ್ಷವಾಗಲಿದೆ. ಈಗ ಇರುವ ಷೇರ್ ಬಟನ್ ಒತ್ತಿದರೆ ಬುಕ್‌ಮಾರ್ಕ್ ಆಯ್ಕೆಯನ್ನು ಕಾಣಬಹುದು. ಅದರ ಬದಲು ಪ್ರತ್ಯೇಕವಾಗಿ ಬುಕ್‌ಮಾರ್ಕ್ ಬಟನ್ ಅಳವಡಿಕೆ ಕಾರ್ಯವು ಸದ್ಯದಲ್ಲೇ ಟ್ವಿಟರ್‌ನಲ್ಲಿ ಕಾಣಿಸಿಕೊಳ್ಳಲಿದೆ. ದಿನಾಂಕ, ಹ್ಯಾಷ್ ಟ್ಯಾಗ್, ಬಳಕೆದಾರ ಇತ್ಯಾದಿ ಆಧಾರಿತದ ಫಿಲ್ಟರಿಂಗ್ ಮೂಲಕ ನಿರ್ದಿಷ್ಟ ಟ್ವೀಟ್‌ಗಳನ್ನು ಮತ್ತು ಪ್ರೊಫೈಲ್‌ಗಳನ್ನು ಹುಡುಕುವ ಫೀಚರ್ ಕೂಡ ಬರಲಿದೆ.

## ಪೇಮೆಂಟ್ ಮಾಡಲು ಅವಕಾಶ

‘ಚೀನಾದ ವೀಚ್ಯಾಟ್ ಮಾದರಿಯಲ್ಲಿ ಟ್ವಿಟರ್ ರೂಪಿಸುವ ಉದ್ದೇಶ ಇದೆ’ ಎಂದಿದ್ದ ಮಸ್ಕ್, ಅದಕ್ಕೆ ಪೂರಕವಾಗಿ ಅಗತ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಟ್ವಿಟರ್ ಅನ್ನು ಮೆಸೇಜಿಂಗ್ ಪ್ಲಾಟ್‌ಫಾರ್ಮ್ ಮಾತ್ರವಲ್ಲದೆ ಪೇಮೆಂಟ್, ವಿಡಿಯೊ ಸ್ಟ್ರೀಮಿಂಗ್, ವಿಡಿಯೊ ಗೇಮ್, ವಾಣಿಜ್ಯ ಮಾರುಕಟ್ಟೆ... ಹೀಗೆ ಹಲವು ಕಾರ್ಯಗಳಿಗೆ ಪ್ರಮುಖ ತಾಣವಾಗಲಿದೆ.

## ಫಾಂಟ್‌ನಲ್ಲೂ ವೈವಿಧ್ಯ

ಟ್ವಿಟರ್‌ನಲ್ಲಿ ಬಳಸುವ ಫಾಂಟ್‌ನಲ್ಲಿ ಬದಲಾವಣೆ ತರುತ್ತಿದ್ದು, ಬೋಲ್ಡ್ ಟೆಕ್ಸ್ಟ್, ಅಂಡರ್‌ಲೈನ್ ಆಯ್ಕೆಯನ್ನು ಪರಿಚಯಿಸುತ್ತಿದೆ. ಫಾಂಟ್ ಹಿಗ್ಗಿಸುವ ಹಾಗೂ ಕುಗ್ಗಿಸುವ ಆಯ್ಕೆಯನ್ನೂ ಪರಿಚಯಿಸುವುದಾಗಿ ಮಸ್ಕ್ ಟ್ವೀಟ್ ಮಾಡಿದ್ದಾರೆ. ಫಾಂಟ್‌ನಲ್ಲಿ ಇಟಾಲಿಕ್ ಶೈಲಿಯೂ ಲಭ್ಯವಾಗಲಿದೆ.